ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1994

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್

ಉತ್ತರಿಸುವ ದಿನಾಂಕ :24.03.2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂ. 63 ರಲ್ಲಿ 5 ಎಕರೆ ಸ್ಥಳವನ್ನು ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ಶಿಕ್ಷಣ ಸಂಸ್ಥೆಯವರು ಅಕ್ರಮವಾಗಿ ಒತ್ತುವರಿ ಮಾಡಿದ ಜಾಗದಲ್ಲಿ ಯಾವಾಗ ಕಟ್ಟಡ ಕಟ್ಟಲು ಆರಂಭಿಸಿದರು; ಈ ಬಗ್ಗೆ ಸರ್ಕಾರಕ್ಕೆ ಅಕ್ರಮ ಕಟ್ಟಡ ನಿರ್ಮಾಣದ ಕುರಿತು ಮಾಹಿತಿ ಬಂದ ದಿನಾಂಕ ಯಾವುದು;	ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂಬರ್ 63 ರಲ್ಲಿ 5-00 ಎಕರೆ ಸ್ಥಳವನ್ನು ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ಶಿಕ್ಷಣ ಸಂಸ್ಥೆಯವರು ಒತ್ತುವರಿ ಮಾಡಿರುವುದು ಮಾನ್ಯ ಶ್ರೀ ಎ.ಟಿ. ರಾಮಸ್ವಾಮಿ ಆಯೋಗದ ವರದಿ ಸಮಯದಲ್ಲಿ ತಯಾರಿಸಿರುವ ನಕ್ಷೆಯಂತೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಅಕ್ರಮಿತ ಜಾಗದಲ್ಲಿರುವ ಅಕ್ರಮ ಕಟ್ಟಡದ ವಿಸ್ತೀರ್ಣವೆಷ್ಟು; ಅದರಲ್ಲಿ ಎಷ್ಟು ಮಹಡಿಗಳು ಇವೆ; (ಸಂಪೂರ್ಣ ವಿವರ ನೀಡುವುದು)	ಒತ್ತುವರಿ ಜಾಗದಲ್ಲಿ ಸುಮಾರು 0-15 ಗುಂಟೆ ವಿಸ್ತೀರ್ಣದಲ್ಲಿ ಅಕ್ರಮ ಕಟ್ಟಡವಿದ್ದು, 2 ಮಹಡಿಗಳಲ್ಲಿ ಒಟ್ಟು 20 ಕೊಠಡಿಗಳಿರುತ್ತವೆ.
ಇ)	ಈ ಸರ್ವೆ ನಂಬರ್ 63ರಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಸಮಯದಲ್ಲಿ ಅಕ್ರಮ ನಿರ್ಮಾಣ ಕುರಿತು ಸದರಿ ಸಂಸ್ಥೆಯವರಿಗೆ ಎಷ್ಟು ಬಾರಿ ನೋಟಿಸ್ ನೀಡಲಾಗಿದೆ; ಯಾವ ಯಾವ ದಿನಾಂಕಗಳಂದು ನೋಟಿಸ್ ನೀಡಲಾಗಿದೆ; ನೋಟಿಸ್ ಗೆ ಉತ್ತರ ಬರದಿದ್ದಲ್ಲಿ ಈ ಕುರಿತು ಕೈಗೊಂಡ ಕ್ರಮಗಳೇನು?	ಈ ಸರ್ವೆ ನಂಬರ್ 63 ರಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಸಮಯದಲ್ಲಿ ಅಕ್ರಮ ನಿರ್ಮಾಣ ಕುರಿತು ಸದರಿ ಸಂಸ್ಥೆಯವರಿಗೆ ತಹಸೀಲ್ದಾರ್ ರವರ ಕಛೇರಿಯ ಪ್ರಕರಣ ಸಂಖ್ಯೆ:ಎನ್‌ಸಿಆರ್/ಸಿಆರ್/08/09-10, ದಿನಾಂಕ.27.05.2009 ರಂದು ಒತ್ತುವರಿ ತೆರವುಗೊಳಿಸಲು ನೋಟೀಸ್ ನೀಡಿದ್ದು, ಸದರಿ ಸಂಸ್ಥೆಯವರು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸದ ಕಾರಣ ತಹಸೀಲ್ದಾರ್ ರವರು ಪ್ರಶ್ನಿತ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ನೀಡಲು ದಿನಾಂಕ.25.07.2009 ಮತ್ತು 14/09/2020 ರಂದು ಆದೇಶಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ: ಡಬ್ಲ್ಯೂ.ಪಿ. ನಂ. 10214/2020 ರಂತೆ ಪ್ರಕರಣ ದಾಖಲಿಸಿ ಒತ್ತುವರಿ ತೆರವಿಗೆ ತಡೆಯಾಜ್ಞೆ ಪಡೆದಿರುತ್ತಾರೆ.

		ಸದರಿ ತಡೆಯಾಜ್ಞೆ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ: ಡಬ್ಲ್ಯೂಎ:578/2020 ರಂತೆ ಸರ್ಕಾರದ ಪರವಾಗಿ ಮೇಲ್ಮನವಿ ಸಲ್ಲಿಸಲಾಗಿತ್ತು. ಮಾನ್ಯ ನ್ಯಾಯಾಲಯವು ದಿ: 02-01-2021 ರಂದು ಅಂತಿಮ ಆದೇಶ ಮಾಡಿ, ದಿನಾಂಕ: 28-02-2021 ರೊಳಗೆ ಒತ್ತುವರಿ ಜಮೀನನ್ನು ಸರ್ಕಾರಕ್ಕೆ ಹಸ್ತಾಂತರಿಸಲು ಆದೇಶಿಸಿರುತ್ತದೆ. ದಿನಾಂಕ: 02-01-2021 ರ ಡಬ್ಲ್ಯೂಎ:578/2020 ಆದೇಶದ ವಿರುದ್ಧ ಇಸ್ಲಾಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ನಂ.2645/2021 ರಂತೆ ಪ್ರಕರಣ ದಾಖಲಿಸಿರುತ್ತದೆ ಹಾಗೂ ಸದರಿ ಸಂಸ್ಥೆಯು ಅಡಿಷನಲ್ ಸಿಟಿ ಸಿವಿಲ್ ಅಂಡ್ ಸೆಷನ್ಸ್ ಜಡ್ಜ್ ರವರಲ್ಲಿಯೂ ಸಹ ಓಎಸ್.ನಂ. 4737/2020 ರಂತೆ ಪ್ರಕರಣ ದಾಖಲಿಸಿರುತ್ತದೆ. ಸದರಿ ಪ್ರಕರಣಗಳು ವಿಚಾರಣಾ ಹಂತದಲ್ಲಿ ಬಾಕಿಯಿರುತ್ತವೆ.

ಸಂಖ್ಯೆ: ಆರ್‌ಡಿ 86 ಎಲ್‌ಜಿಕ್ಯೂ 2021

(ಆರ್ .ಅಶೋಕ)
ಕಂದಾಯ ಸಚಿವರು.